ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಭ್ರಷ್ಟಾಚಾರ ಹೆಚ್ಚಾಗಿರುವುದಕ್ಕೆ ಕಾರಣವೇನೆಂದು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಅವರು ಲೋಕಾಯುಕ್ತರನ್ನು ಚುರುಕು ಮಾಡುವ ಮುಖೇನ ರಾಜ್ಯದಲ್ಲಿ ಇವತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದ್ದಾರೆ. ಅದನ್ನು ನಾನೂ ಸಹ ಸ್ವಾಗತ ಮಾಡುತ್ತೇನೆ. ಆದರೆ ಭ್ರಷ್ಟಾಚಾರಕ್ಕೆ ಎಲ್ಲಾ ಅಧಿಕಾರಿಗಳು ಕಾರಣರಲ್ಲ. ಎಲ್ಲಾ ರಾಜಕಾರಣಿಗಳು ಕಾರಣರಲ್ಲ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ ಲೋಕಾಯುಕ್ತರ ಅಧಿಕಾರವನ್ನು ಕೆಲವು ರಾಜಕಾರಿಣಿಗಳು ಮಾಡುವಂತಹ ಭ್ರಷ್ಟಾಚಾರದ ಬಗ್ಗೆ ಎನ್‌ಕ್ವಾಯರಿ ಮಾಡಲಿಕ್ಕೆ ಏನಾದರೂ ಸರ್ಕಾರ ಮನಸ್ಸು ಮಾಡುತ್ತದೆಯೇ? ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ಏನಾದರೂ ಕ್ರಮ ಕೈಗೊಳ್ಳುತ್ತಾರೆಯೇ ಎಂದು ತಮ್ಮ ಮುಖಾಂತರ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ನಾನೂ ಲೋಕಾಯುಕ್ತರ ಅಧೀನಕ್ಕೆ ಬರುತ್ತೇನೆ. ಚೆನ್ನಿಗಪ್ಪನವರು ಬರುತ್ತಾರೇನೋ ಗೊತ್ತಿಲ್ಲ. ಪಬ್ಲಿಕ್ ಸರ್ವೆಂಟ್ಸ್.ಎಲ್ಲರೂ ಕೂಡ ಲೋಕಾಯುಕ್ತರವರ ವ್ಯಾಪ್ತಿಗೆ ಬರುತ್ತಾರೆ.

ಶ್ರೀ ಪಿ.ಜಿ. ಆರ್. ಸಿಂಧ್ಯ: ಒಂದು ನಿಮಿಷ. ದಯವಿಟ್ಟು ಕ್ಷಮಿಸಿ ಸಮಯ ವೇಸ್ಟ್ ಮಾಡುತ್ತಿದ್ದೇನೆ. ಇಡೀ ರಾಜ್ಯದ ಜನ ಬಹಳ ಕುತೂಹಲದಿಂದ ಇದ್ದಾರೆ. ನೀವು ಒಬ್ಬರನ್ನು ಮಂತ್ರಿಗಳನ್ನಾಗಿ ಸಚಿವಸಂಪುಟಕ್ಕೆ ತೆಗೆದುಕೊಂಡಿದ್ದೀರಿ, ಅವರ ಬಗ್ಗೆ ಲೋಕಾಯುಕ್ತರ ಮುಂದೆ ಒಂದು ವಿಚಾರಣೆ ಇತ್ತು. ಲೋಕಾಯುಕ್ತರು ನನ್ನ ಪರ್ವ್ಯೂಗೆ ಬರುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಅದರ ಹಿನ್ನೆಲೆಯಲ್ಲಿ ಮಾನ್ಯ ಚೆನ್ನಿಗಪ್ಪನವರು ಪ್ರಶ್ನೆಯನ್ನು ಕೇಳಿರತಕ್ಕದ್ದು. ತಾವು ಮುಖ್ಯಮಂತ್ರಿಗಳು, ಮಂತ್ರಿಗಳು ಲೋಕಾಯುಕ್ತರ ಕೆಳಗಡೆ ಬರುತ್ತಾರೆನ್ನುವುದು ಒಂದು ಭಾಗ. ಆದರೆ ಎಂಎಲ್‌ಎಗಳು ಬರುತ್ತಾರೆಯೇ? ಈಗ ಲೋಕಾಯುಕ್ತರವರು ಎಂಎಲ್‌ಎ ಅವರ ಮೇಲಿನ ದೂರನ್ನು ಸ್ಟೈಟ್ ಅವೆ ರಿಜೆಕ್ಟ್ ಮಾಡಿದ್ದಾರೆ. ಒಂದೂವರೆ ವರ್ಷದಿಂದ ಬಾಕಿಯಿದ್ದ ಪ್ರಕರಣ, ಸಚಿವಸಂಪುಟ ವಿಸ್ತರಣೆ ನಾಳೆಯೊ ನಾಡಿದ್ದೋ ಆಗುತ್ತದೆನ್ನುವ ಸಂದರ್ಭದಲ್ಲಿ ಅವರು ಬಹುಶಃ ವಿಚಾರಣೆಯನ್ನು ಮುಗಿಸಿ ಇದು ನನ್ನ ಹಂತಕ್ಕೆ ಬರುವುದಿಲ್ಲವೆನ್ನುವ ತೀರ್ಮಾನವನ್ನು ಕೊಟ್ಟಿದ್ದಾರೆ. ಅದಕ್ಕೆ ತಾವು ಲೋಕಾಯುಕ್ತರ ಅಧಿಕಾರವನ್ನು ಬಲಪಡಿಸಬೇಕೆಂದು ಸಚಿವಸಂಪುಟದ ಉಪ ಸಮಿತಿಯನ್ನು ಮಾಡಿದ್ದೇನೆಂದು ಹೇಳಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ: ಸದನ ಒಪ್ಪುವುದಾದರೆ, ಸದನದ ಎಲ್ಲಾ ಸದಸ್ಯರು ಲೋಕಾಯುಕ್ತರ ವ್ಯಾಪ್ತಿಗೆ ಬರಬೇಕೆನ್ನುವುದು ನನ್ನ ವ್ಯಕ್ತಿಗತವಾದ ಅನಿಸಿಕೆ. ಈ ಅನಿಸಿಕೆಗೆ ತಾವು ಸ್ಪಂದಿಸುವುದಾದರೆ ನಮ್ಮ ಮಂತ್ರಿಮಂಡಲ ಇದರ ಬಗ್ಗೆ ಸದನದ ಮುಂದೆ ಸೂಕ್ತ ತಿದ್ದುಪಡಿಯನ್ನು ತರುತ್ತದೆ.

ಪಟ್ಟಣ ಪ್ರದೇಶದಲ್ಲಿ ಪ್ಯಾಕೇಜ್ ಕಾಮಗಾರಿಗಳಿಗೆ ಹುಡ್ಕೋ ನೆರವು

161(246) - ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣ ಪ್ರದೇಶದಲ್ಲಿ ಪ್ಯಾಕೇಜ್ ಕಾಮಗಾರಿಗಳಿಗೆ ಹುಡ್ಕೋ ನೆರವು ಎಷ್ಟು?

ಆ) ಹಾಗಿದ್ದಲ್ಲಿ, ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆಯೇ?

ಇ) ಕೈಗೆತ್ತಿಕೊಂಡ ರಸ್ತೆಗಳ ಡಾಂಬರೀಕರಣವಾಗಿರುವುದೆ?

ಶ್ರೀ ಎಸ್. ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವ ಕಾರ್ಯಕ್ರಮಕ್ಕೆ ಹುಡ್ಕೋ ಸಂಸ್ಥೆಯಿಂದ ರೂ. 130.00 ಕೋಟಿಗಳ ಸಾಲ ಪಡೆಯಲಾಗಿದೆ.

ಆ) ರಾಜ್ಯದ 197 ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರಸ್ತೆ ಹಾಗೂ ಇತರೇ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಇ) ಕೆಲವು ರಸ್ತೆಗಳ ಡಾಂಬರೀಕರಣ ಕಾಮಗಾರಿಗಳನ್ನು ಮಾಡಲಾಗಿದ್ದು, ಮಳೆಗಾಲದ ನಂತರ ಉಳಿದ ಕಾಮಗಾರಿಗಳನ್ನು ಮಾಡಲಾಗುವುದು.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಈ ಸ್ಥಳೀಯ ಸಂಸ್ಥೆಗಳಿಗೆ ಅಲ್ಲಿ ಹಣಕಾಸಿನ ನೆರವು ಮೊಬಿಲೈಸ್ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಅತ್ಯಂತ ವ್ಯಾಪಕವಾದ ಚಿಂತನೆಯನ್ನು ಮಾಡಿ ಈ ರಾಜ್ಯದಲ್ಲಿ 197 ಸಂಸ್ಥೆಗಳಲ್ಲಿ ಈ ಒಂದು ಬೃಹತ್ ಕಾರ್ಯಕ್ರಮವನ್ನು ಮಾಡುವುದಕ್ಕೆ ಹುಡ್ಕೋ ನೆರವನ್ನು ಪಡೆದುಕೊಂಡರು. ಇದಕ್ಕೆ 130 ಕೋಟಿ ರೂಪಾಯಿಗಳನ್ನು ಸಾಲದ ರೂಪವಾಗಿ ತೆಗೆದುಕೊಂಡಿದ್ದಾರೆ. ಆದರೆ ಇದು ಏನಾಗಿದೆ ಎಂದರೆ 2001 ನೇ ಇಸವಿಯಲ್ಲಿ ಈ ಸಾಲವನ್ನು ಪಡೆದುಕೊಂಡ ನಂತರ ಇನ್ನೂ ಹಲವಾರು ಕಾಮಗಾರಿಗಳು ಡಾಂಬರೀಕರಣ ಆಗದೇ ಉಳಿದಿವೆ. ಅಷ್ಟೇ ಅಲ್ಲ ಮಾಡಿರುವುದೂ ಕೂಡ ಗುಣಮಟ್ಟ ಕಳಪೆಯಾಗಿದೆ. ಹಾಗಾಗಿ ಈ ಉದ್ದೇಶ ಸಫಲತೆಯನ್ನು ಪಡೆದುಕೊಂಡಿಲ್ಲ. ಆದ್ದರಿಂದ ನನ್ನ ಅನಿಸಿಕೆ ಏನೆಂದರೆ ಇದಕ್ಕೆ ಏನಾದರೂ ಕಾಲಮಿತಿ ಇರಬೇಕಿತ್ತು ಮತ್ತು ಇದು ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಉಚಿತ ಎಂದು ನಾನು ಕೇಳುತ್ತೇನೆ. ಮತ್ತು ಇನ್ನೂ ಎಷ್ಟು ಮಳೆಗಾಲ ಕಳೆದು ಹೋದಮೇಲೆ ಇವರು ಡಾಂಬರೀಕರಣ ಮಾಡುತ್ತಾರೆ ಎಂಬುದರ ಬಗ್ಗೆ ಮಾನ್ಯಸಚಿವರು ಉತ್ತರಿಸಬೇಕೆಂದು ನಾನು ತಮ್ಮ ಮೂಲಕ ಅವರನ್ನು ಕೇಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಅಧ್ಯಕ್ಷರೇ, ಈಗಾಗಲೇ ಮೆಟಲಿಂಗ್ ಮಾಡತಕ್ಕದ್ದು ಬಹಳಷ್ಟು ಮುಗಿಯುತ್ತಾ ಬಂದಿದೆ. ಕೆಲವೊಂದು ಕಡೆ ಅಸ್ಫಾಲ್ಟಿಂಗ್ ಕೂಡ ನಡೆದಿದೆ. ಆದರೆ ಮಳೆಯ ಕಾರಣದಿಂದ ಕೆಲಸ ನಿಂತಿದೆ. ಈ ಮಳೆಗಾಲ ಕಳೆದ ತಕ್ಷಣವೇ ಉಳಿದ ಎಲ್ಲಾ ಅಸ್ಫಾಲ್ಟಿಂಗ್ ಮಾಡತಕ್ಕಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಇನ್ನು ಎಷ್ಟು ಮಳೆಗಾಲ ಕಳೆಯಬೇಕು? ಕಳಪೆಗುಣಮಟ್ಟದ ಕೆಲಸ ಆಗಿದೆ. ಮೆಟಲಿಂಗ್ ಮಾಡಿರುವುದು ಇನ್ನು ಒಂದು ಮಳೆಗಾಲ ಬಂದರೆ ಎಲ್ಲಾ ಕಿತ್ತುಕೊಂಡುಹೋಗುತ್ತದೆ. ಇದರ ಉದ್ದೇಶ ಏನೆಂದರೆ ಸ್ಥಳೀಯ ಸಂಸ್ಥೆಗಳಿಗೆ ನೆರವು ಸಿಗುತ್ತಿಲ್ಲವೆಂದು ಈ ಸಾಲವನ್ನು ತೆಗೆದುಕೊಂಡಿರುವುದು. ಅದಕ್ಕಾಗಿ ಇದನ್ನು ತನಿಖೆಗೆ ಒಳಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಕುಮಾರ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಇದು ಈ ತರಹ ಎರಡು-ಮೂರು ದೂರುಗಳು ಬಂದಿರುವುದರಿಂದ ನಮ್ಮ ಕನ್ಸಲ್ಟೆಂಟ್ ಯಾರು ಡೆಲ್ಲಿಯಲ್ಲಿ ಇದ್ದಾರೆ. ಅವರು ಹಾಗೂ ನಮ್ಮ ಕರ್ನಾಟಕ ಅರ್ಬನ್ ವಾಟರ್‌ಸಪ್ಲೈನವರು ಮತ್ತು ನಮ್ಮ ಲೋಕಲ್ ಇಂಜಿನಿಯರ್ ಈ ಮೂವರನ್ನೂ ಕೂಡಿ ಒಂದು ನೋಡಲ್ ಏಜೆನ್ಸಿಯಾಗಿ

ಮಾಡಲಾಗಿದೆ. ಅವರು ಮೂರೂ ಜನರೂ ಕೂಡ ಇನ್‌ಸ್ಪೆಕ್ಷನ್ ಮಾಡಿಯಾದ ಮೇಲೆ ತದನಂತರ ಕಾಮಗಾರಿಗಳಿಗೆ ಬಿಲ್ ಪಾವತಿ ಮಾಡುವುದಕ್ಕೆ ಕೆಲಸವನ್ನು ಹಮ್ಮಿಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಇನ್ನೂ ಹತ್ತು ನಿಮಿಷ ಮಾತ್ರ ಉಳಿದಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೇ, ಈ 197 ಸ್ಥಳೀಯ ಸಂಸ್ಥೆಗಳಲ್ಲಿ ಈ ರೀತಿ ಪ್ಯಾಕೇಜ್ ಕಾಮಗಾರಿಗಳನ್ನು ಹುಡ್ಕೋ ನೆರವಿನಿಂದ ಏನು ತೆಗೆದುಕೊಂಡಿದ್ದೇವೆ, ಇದು ಹಿಂದೆ ಬಹಳ ತಪ್ಪು ಮತ್ತು ದೋಷಪೂರಿತವಾಗಿ ರೂಪುಗೊಂಡಂಥ ಯೋಜನೆ. ದೆಹಲಿಯಲ್ಲಿ ಇರುವ ಯಾರೋ ಒಬ್ಬರು, ಇನ್ನಾವುದೋ ರಾಜ್ಯದಲ್ಲಿ ಇರುವಂಥ ಕಂಟ್ರಾಕ್ಟರ್ ನಮ್ಮ ಊರಿಗೆ ಬಂದು ಕೆಲಸ ಮಾಡುತ್ತಾರೆ. ಯಾರಿಗೂ ಯಾವುದೇ ರೀತಿಯಿಂದ ಸಂಬಂಧ ಪಡದೇ ಇರುವವರು ಇಲ್ಲಿ ಬಂದು ಯಾವುದೋ ರೀತಿಯಲ್ಲಿ ಕೆಲಸ ಮಾಡುತ್ತೇವೆ ಎಂದು ಹೇಳುತ್ತಾರೆ. ಈ ಪ್ಯಾಕೇಜ್ ಹಣದ ಕಾಮಗಾರಿಗಳನ್ನು ಸರ್ಕಾರ ಕೈಬಿಟ್ಟು ಅದನ್ನು ಸ್ಥಳೀಯ ಸಂಸ್ಥೆಗಳಿಗೇ, ಜಿಲ್ಲಾಮಟ್ಟ, ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾಪಂಚಾಯತಿಗಳಿಗೇ ಕೊಡಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನನ್ನ ಪ್ರಶ್ನೆ ಏನೆಂದರೆ..

ಅಧ್ಯಕ್ಷರು : ಮಂತ್ರಿಗಳಿಗೆ ಗೊತ್ತಾಗಿದೆ, ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಡೆಲ್ಲಿಯವರು ಯಾರೋ ನಮ್ಮ ಊರಿಗೆ ಬಂದು ಕೆಲಸ ಮಾಡುತ್ತಿದ್ದಾರೆ. ಎರಡು ವರ್ಷವಾದರೂ ಕೆಲಸ ಆಗುತ್ತಿಲ್ಲ. ಈ ಪ್ಯಾಕೇಜ್ ಪ್ರೋಗ್ರಾಮ್ ಈ ರೀತಿಯಾದರೆ ನಮ್ಮ ರಾಜ್ಯದ ಅಭಿವೃದ್ಧಿ ಕೆಲಸಗಳ ಗತಿ ಏನು?

ಶ್ರೀ ಕೆ.ಎಂ. ಕೃಷ್ಣಮೂರ್ತಿ : 197 ತಾಲ್ಲೂಕುಗಳಲ್ಲಿ ಪ್ಯಾಕೇಜ್ ಟೆಂಡರ್‌ಗಳನ್ನು ಪುರಸಭೆಗಳಲ್ಲಿ, ನಗರಸಭೆಗಳಲ್ಲಿ ಕರೆದಿದ್ದಾರೆ. ಕಡೂರಿನಲ್ಲಿ ಕೂಡ ಹುಡ್ಕೋದಿಂದ 50 ಲಕ್ಷರೂಪಾಯಿಗಳಿಗೆ ಒಂದು ಪ್ಯಾಕೇಜ್ ಟೆಂಡರ್‌ನ್ನು ಅಂದರೆ ಮೈಸೂರು ವಿಭಾಗದಲ್ಲಿ 46 ಪುರಸಭೆಗಳನ್ನು ಸೇರಿಸಿ 37 ಕೋಟಿ ರೂಪಾಯಿಗಳಿಗೆ ಕಾಮಗಾರಿಗಳನ್ನು ಮಾಡಿದ್ದಾರೆ. ಅವರು ಕೇರಳದವರು. ಮುಖ್ಯಮಂತ್ರಿಗಳು ಹೇಳುತ್ತಾರೆ ಏನೆಂದರೆ ಪಾರದರ್ಶಕವಾಗಿ ಪ್ಯಾಕೇಜ್ ಟೆಂಡರ್ ಮೂಲಕ ಒಳ್ಳೆಯ ಗುಣಮಟ್ಟದ ಕಾಮಗಾರಿಗಳನ್ನು ಮಾಡಿಸುತ್ತೇವೆ ಎಂದು ಆದರೆ ಇಲ್ಲಿ ಸ್ಥಳೀಯ ಶಾಸಕರಿಗಾಗಲೀ ಅಥವಾ ಪುರಸಭೆಯವರಿಗಾಗಲೀ ಯಾರನ್ನೂ ಕೇಳದೆ ಈ ಕಾಮಗಾರಿಗಳನ್ನು ಮಾಡಿದ್ದಾರೆ. ಈಗಾಗಲೇ ನಾನು ಇದರ ಬಗ್ಗೆ ಅರ್ಬನ್‌ವಾಟರ್‌ಸಪ್ಲೈ ಮುಖ್ಯ ಅಭಿಯಂತರರಿಗೆ ಮತ್ತು ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತಂದಿದ್ದೇನೆ. ಆದರೆ ಇದನ್ನು ಯಾವುದೋ ಸ್ಥಳೀಯ ಸಬ್‌ಕಂಟ್ರಾಕ್ಟರ್‌ಗೆ ಕೊಡುವುದಾದರೆ ಇದನ್ನು ಪ್ಯಾಕೇಜ್ ಟೆಂಡರ್ ಎಂದು ಏಕೆ ಕರೆಯಬೇಕು? ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತದೆ?

ಅಧ್ಯಕ್ಷರು : ಉಪಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಈ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ತಮ್ಮ ಮೂಲಕ ತರುತ್ತಿದ್ದೇನೆ.

ಅಧ್ಯಕ್ಷರು : ಕೊನೆಯ ಪ್ರಶ್ನೆಯನ್ನು ಮಾನ್ಯ ಮಹದೇವಪ್ರಸಾದ್ ಕೇಳುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮೈಸೂರು ರೆವಿನ್ಯೂ ವಿಭಾಗದ ಎಲ್ಲಾ ಪುರಸಭೆಗಳದ್ದು, ನಗರಸಭೆ, ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುವಂಥ ಪ್ಯಾಕೆಜ್ ಟೆಂಡರ್‌ನಲ್ಲಿ ಒಬ್ಬರೇ ಗುತ್ತಿಗೆದಾರರಿಗೆ ಕೊಟ್ಟಿದ್ದಾರೆ. ಆದ್ದರಿಂದ ಅವರು ಯಾವಾಗ ಬಂದು ಕೆಲಸ ಮಾಡುತ್ತಾರೆ, ಏನೇನು ಮಾಡಿದ್ದಾರೆ ಎಂಬ ಮಾಹಿತಿ ನಮ್ಮ ಸ್ಥಳೀಯ ಪುರಸಭೆಯವರಿಗಾಗಲೀ, ಶಾಸಕರಿಗಾಗಲೀ ಗೊತ್ತಾಗುವುದಿಲ್ಲ; ಹೀಗಾಗಿ ಪ್ಯಾಕೇಜ್ ಟೆಂಡರ್ ಬೆಂಗಳೂರಿನಲ್ಲಿಯೇ ಡೀಲ್ ಆಗುವುದರಿಂದ ಅಲ್ಲಿ ನಮ್ಮ ಕ್ಷೇತ್ರದಲ್ಲಿ ಏನು ಕೆಲಸ ಮಾಡಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ನಾವು ಸ್ಥಳಕ್ಕೆ ಹೋದರೆ ಮಾತ್ರ ಗೊತ್ತಾಗುತ್ತದೆ. ಗುತ್ತಿಗೆದಾರರು ಯಾರು ಎನ್ನುವುದು ಇದುವರೆಗೂ ನಮ್ಮ ಗಮನಕ್ಕೆ ಬಂದಿಲ್ಲ. ಈಗ ಅವರು ಏನು ಕೆಲಸ ಮಾಡುತ್ತಿದ್ದಾರೆ ಎನ್ನುವುದರ ಮಾಹಿತಿ ಕೂಡ ನಮಗೆ ಇಲ್ಲ. ಆದ್ದರಿಂದ ಇದರ ಬಗ್ಗೆ ವ್ಯತ್ಯಾಸಗಳು ಆಗಿರುವುದರಿಂದ, ತನಿಖೆ ಮಾಡಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಮಾಡುತ್ತೇನೆ.

ಅಧ್ಯಕ್ಷರು: ಎಲ್ಲರಿಗೂ ಸೇರಿಸಿ ಒಂದೇ ಸಲ ಉತ್ತರ ಹೇಳಿ. ಇಲ್ಲದಿದ್ದರೆ ಐದು ಪ್ರಶ್ನೆಗಳು ಉಳಿದುಹೋಗುತ್ತವೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ, ಅದು ನಮ್ಮ ಗಮನಕ್ಕೆ ಬಂದಿದೆ. ಅದಕ್ಕೋಸ್ಕರವೇ ಮುಂಚೆ ಯಾವುದೇ ಒಂದು ಏಜೆನ್ಸಿಗಳು ಇಲ್ಲದ ಹಾಗೆ ಡೈರೆಕ್ಟ್ ಆಗಿ ಅವರ ಕೆಲಸಕಾರ್ಯಗಳನ್ನು ನೋಡತಕ್ಕಂಥ ವ್ಯವಸ್ಥೆ ಇತ್ತು. ಆದರೆ ಈಗ ಲೋಕಲ್‌ಬಾಡಿಸ್ ಇಂಜಿನಿಯರ್ಸ್ ಯಾರು ಇದ್ದಾರೆ ಅವರು ಮತ್ತು ನಮ್ಮ ಕೆ.ಯು.ಡಬ್ಲ್ಯೂ.ಎಸ್.ಎಸ್. ಡಿಬಿಯವರು ಕೂಡಿ ಮಾನ್ಯತಾವರದಿಯನ್ನು ಸಲ್ಲಿಸಿದ ಮೇಲೆ ಮಾತ್ರ ಬಿಲ್ ಪಾವತಿ ಮಾಡತಕ್ಕಂಥ ಕ್ರಮತೆಗೆದುಕೊಳ್ಳಲಾಗಿದೆ. ಇವಾಗ ಆಸ್ಪಾಲ್ಟಿಂಗ್‌ನಲ್ಲಿ ಕಳಪೆ ಕೆಲಸ ಆಗಿದೆ ಎನ್ನುವುದಾದರೆ ನೀವೇ ಲೋಕಲ್ ಆಗಿ ಸದಸ್ಯರಾಗಿರುತ್ತೀರಿ. ನೀವು ಹೋಗಿ ನೋಡಿ ಯಾವ ಕೆಲಸವನ್ನು ನೀವು ಅಥವಾ ಲೋಕಲ್‌ಬಾಡಿಯವರು ಅಪ್ರೂವ್ ಮಾಡಿರುತ್ತೀರಿ....

(ಗೊಂದಲ)

ಅಧ್ಯಕ್ಷರು: ಸಂಬಂಧಪಟ್ಟ ಮಂತ್ರಿಗಳು ಉತ್ತರ ಹೇಳುತ್ತಾರೆ. ಮಾನ್ಯ ಶಿವಕುಮಾರ್ ತಾವು ಉತ್ತರ ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಅಧ್ಯಕ್ಷರೇ, ಹುಡ್ಕೋ ನೆರವಿನ ಯೋಜನೆ ಇರಬಹುದು, ಅಥವಾ ಯಾವುದೇ ಯೋಜನೆಯ ಅಡಿಯಲ್ಲಿ ಯಾವುದೇ ಕೆಲಸವನ್ನು ಸರ್ಕಾರ ತೆಗೆದುಕೊಳ್ಳಬೇಕಾದರೆ ಲೋಕಲ್‌ಬಾಡಿಯವರು ಇಂತಹ ಕೆಲಸ ಬೇಕು ಎಂದು ಹೇಳಿ, ಇವರೇ ಸದಸ್ಯರು ಇರುತ್ತಾರೆ. ಇವರೇ ಸ್ಪಾನ್ಸರ್ ಮಾಡುತ್ತಾರೆ. ಇದನ್ನು ಮಾಡಿದಂಥ ಸಂದರ್ಭದಲ್ಲಿ ಸ್ವಲ್ಪ ತಡವಾಗಬಹುದು ಅಷ್ಟೆ. ಅದು ಹೋಗಿ ಸ್ಯಾಂಕ್ಷನ್ ಆಗಿ ಬರುವುದಕ್ಕೆ ಸ್ವಲ್ಪ ತಡವಾಗಬಹುದು. ಆದರೆ ಪ್ರತಿಯೊಂದು ಕೆಲಸ ಕೂಡ ಆ ವ್ಯಾಪ್ತಿಯಲ್ಲಿ ಏನು ನಡೆಯುತ್ತದೆ ಅದು ಅವರ ಗಮನಕ್ಕೆ ಬಂದೇ ಬಂದಿರುತ್ತದೆ. ಏಕೆಂದರೆ ಅವರು ಮೆಂಬರ್ಸ್ ಆಗಿರುತ್ತಾರೆ...

(ಗೊಂದಲ)

ಅಧ್ಯಕ್ಷರು : ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಲ್ಲದೆ ಬೇರೆ ಯಾವುದನ್ನೂ ಬರೆದುಕೊಳ್ಳಬೇಡಿ. ಮಂತ್ರಿಗಳು ಏನು ಹೇಳುತ್ತಾರೆ ಅದನ್ನು ಮಾತ್ರ ಬರೆದುಕೊಳ್ಳಿ. ಬೇರೆ ಯಾರು ಮಾತನಾಡಿದರೂ ಬರೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಕಳವೆ ಎಂದು ಕೆಲಸ ಏನುಬೇಕಾದರೂ ಹೇಳಿ. ಅದೆಲ್ಲಾ ನೋಡೋಣ. ಆದರೆ ನಾವು ಯಾವ ಕೆಲಸಕ್ಕೆ ಕೂಡ ಮಂಜೂರಾತಿ ಅಂತೂ ಮಾಡಿಲ್ಲ. ನೀವು ಕೊಟ್ಟಿರಬಹುದು ಅಥವಾ ಲೋಕಲ್ ಬಾಡೀಸ್ ಕೊಟ್ಟಿರಬಹುದು, ಅದು ಲೋಕಲ್ ಬಾಡೀಸ್ ಸ್ಪಾನ್ಸರ್ ಮಾಡಿರುವ ಕೆಲಸವನ್ನೇ ಸರ್ಕಾರ ತೆಗೆದುಕೊಂಡಿರುವುದು. ಬೇರೆ ಯಾವ ಕೆಲಸವನ್ನೂ ನಾವು ತೆಗೆದುಕೊಂಡಿಲ್ಲ.

(ಗೊಂದಲ)

ಅಧ್ಯಕ್ಷರು : ಮಂತ್ರಿಗಳು ಸರಿಯಾಗಿ ಉತ್ತರ ಹೇಳಿದ್ದಾರೆ. ಯಾರಿಗೂ ಅವಕಾಶ ಇಲ್ಲ. ಮಾನ್ಯ ಗೋಪಾಲ ಭಂಡಾರಿಯವರೇ, ಮುಂದಿನ ಪ್ರಶ್ನೆ ಕೇಳಿ.

ಕಾರ್ಕಳದಲ್ಲಿ ನೀರು ಶುದ್ದೀಕರಣ ಘಟಕ ಸ್ಥಾಪಿಸುವುದು

159(1170) - ಶ್ರೀ ಗೋಪಾಲ ಬಂಡಾರಿ. ಹೆಚ್. (ಕಾರ್ಕಳ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳ ಪುರಸಭೆಯಲ್ಲಿ ನೀರು ಸರಬ ರಾಜಿಗಾಗಿ ಬಲ್ಮ ಗುಂಡಿಯಲ್ಲಿ ಅಣೆಕಟ್ಟು ನಿರ್ಮಿಸಲಾಗಿದ್ದು ಈ ನೀರನ್ನು ಶುದ್ದೀಕರಿಸಲು ಶುದ್ದೀಕರಣ ಘಟಕವನ್ನು ಸ್ಥಾಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಶುದ್ದೀಕರಣ ಘಟಕವನ್ನು ಸ್ಥಾಪಿಸಲಾಗುವುದೇ?

ಆ) ಇಲ್ಲಿನ ಓವರ್ ಹೆಡ್ ಟ್ಯಾಂಕ್‌ಗೆ ಸರಿಯಾಗಿ ನೀರು ಸಂಗ್ರಹಣೆಯಾಗದೆ ಅದಕ್ಕಾಗಿ ಎಕ್ಸ್‌ಪ್ರೆಸ್ ಲೈನಿನ ಅವಶ್ಯಕತೆ ಇದ್ದು, ಆ ಕುರಿತು ಪ್ರಸ್ತಾವನೆಯನ್ನು ಮಂಜೂರಾತಿಗಾಗಿ ಸಲ್ಲಿಸಿದ್ದು ನಿಜವೇ?

ಇ) ಹಾಗಿದ್ದಲ್ಲಿ ಅದನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಕಾರ್ಕಳ ಪುರಸಭೆಯಲ್ಲಿ ನೀರು ಸರಬರಾಜಿಗಾಗಿ ಬಲ್ಮ ಗುಂಡಿಯಲ್ಲಿ ಅಣೆಕಟ್ಟು ನಿರ್ಮಿಸಲಾಗಿದ್ದು ಅಲ್ಲಿಂದ ನೀರನ್ನು ಹಾಲಿ ಇರುವ ಜಲ ಶುದ್ದೀಕರಣಾಗಾರಕ್ಕೆ ಪಂಪು ಮಾಡಲಾಗುತ್ತಿದೆ. ಈ ಜಲ ಶುದ್ದೀಕರಣಾಗಾರ ಘಟಕದ ಸಾಮರ್ಥ್ಯ 4.00 ಎಂಎಲ್‌ಡಿ ಇದ್ದು ಪಟ್ಟಣದ ಹಾಲಿ ಜನಸಂಖ್ಯೆಗೆ ಈ ಜಲಶುದ್ದೀಕರಣ ಘಟಕದ ಸಾಮರ್ಥ್ಯವು ಸಾಕಾಗುತ್ತದೆ. ಈ ಯೋಜನೆಯನ್ನು 1997ರಲ್ಲಿ ಪೂರ್ಣಗೊಳಿಸುವಾಗ ಹಾಲಿ ಇರುವ ಜಲಶುದ್ದೀಕರಣ ಕೇಂದ್ರವನ್ನು ನವೀಕರಿಸಲಾಗಿದೆ. ಈ ಯೋಜನೆಯನ್ನು 197ರಲ್ಲಿ ಸಂಪೂರ್ಣಗೊಳಿಸಿ, ಮುಂದಿನ ನಿರ್ವಹಣೆಗಾಗಿ ಕಾರ್ಕಳ ಪುರಸಭೆಗೆ ಹಸ್ತಾಂತರಿಸಲಾಗಿದೆ.

ಆ) ಹೌದು.

ಇಲ್ಲಿನ ಟ್ಯಾಂಕಿಗೆ ನೀರನ್ನು ಒದಗಿಸುವ ಸಲುವಾಗಿ ರೂ. 90.00 ಮೊತ್ತದ ಅಂದಾಜನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಪರಿಶೀಲನೆಯಲ್ಲಿದೆ.

ಇ) ಹೌದು.

ಇಲ್ಲಿನ ಟ್ಯಾಂಕಿಗೆ ನೀರನ್ನು ಒದಗಿಸುವ ಸಲುವಾಗಿ ರೂ. 90.00 ಲಕ್ಷ ಮೊತ್ತದ ಅಂದಾಜನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಪರಿಶೀಲನೆಯಲ್ಲಿದೆ.